**ಕರ್ನಾಟಕ ವಿಧಾನಸಭೆ**
**ಹದಿನಾಲ್ಕನೇ ವಿಧಾನಸಭೆ**
**ಹನ್ನೆರಡನೇ ಅಧಿವೇಶನ**

# ಕರ್ನಾಟಕ ಮರಗಳ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ-40)**

ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976ನ್ನು (1976ರ ಕರ್ನಾಟಕ ಅಧಿನಿಯಮ 76) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು ಕರ್ನಾಟಕ ಮರಗಳ ಸಂರಕ್ಷಣೆ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 27ಎಎ ಹೊಸ ಪ್ರಕರಣದ ಸೇರ್ಪಡೆ.**- ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 76) 27ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**27ಎಎ. ನೆಟ್ಟಿರುವ ಮರ ಪ್ರಭೇದಗಳ ಆಯ್ಕೆಯನ್ನು ನಿಯಂತ್ರಿಸಲು ರಾಜ್ಯ ಸರ್ಕಾರದ ಅಧಿಕಾರ.**- ಯಾವುವೇ ಮರ ಪ್ರಭೇದಗಳನ್ನು ನೆಡುವುದು, ಪಸರಿಸುವುದು ಅಥವಾ ಬೆಳೆಸುವುದು ಪರಿಸರ ಅಥವಾ ಅಂರ್ತಜಲ ಲಭ್ಯತೆಗೆ ಹಾನಿಕಾರಕವಾಗುತ್ತದೆಂದು ಅಥವಾ ಆ ಪ್ರಭೇದಗಳು ಅನ್ಯಜಾತಿಯ ಅಥವಾ ಆಕ್ರಮಣಶೀಲ ಪ್ರಭೇದಗಳ ಹರಡುವಿಕೆಗೆ ಕಾರಣವಾಗುತ್ತದೆಂದು ಅಥವಾ ಅದು ಪರಿಸರದ ನೈರ್ಮಲ್ಯಕ್ಕೆ ಪ್ರತಿಕೂಲವಾಗಿ ಬಾಧಿಸುವ ರೋಗಗಳಿಗೆ ಕಾರಣವಾಗುವಂತ ಕೀಟಗಳು ಮತ್ತು ವಾಹಕಗಳಿಗೆ ಪೋಷಕ

ಅಥವಾ ಪರ್ಯಾಯ ಪೋಷಕವಾಗುತ್ತದೆಂದು, ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಲ್ಲಿ ಪರಿಗಣಿಸಿದರೆ, ಆಗ ಅದು ಅವಶ್ಯವೆಂದು ಭಾವಿಸಬಹುದಾದ ಅಂಥ ಪ್ರದೇಶಗಳಲ್ಲಿ ಮತ್ತು ಅಂಥ ಸಮಯಕ್ಕೆ ಆ ಮರ ಪ್ರಭೇದಗಳನ್ನು ನೆಡುವುದನ್ನು ಅಥವಾ ಬೆಳೆಸುವುದನ್ನು ಅಧಿಸೂಚನೆಯ ಮೂಲಕ ನಿಯಂತ್ರಿಸಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪರಿಸರಕ್ಕೆ ಅಥವಾ ಅಂತರ್ಜಲ ಲಭ್ಯತೆಗೆ ಹಾನಿಯುಂಟು ಮಾಡುವ ಅಥವಾ ಅನ್ಯಜಾತಿಯ ಅಥವಾ ಆಕ್ರಮಣಶೀಲ ಪ್ರಬೇಧಗಳು ಹರಡಲು ಕಾರಣವಾಗುವ ಅಥವಾ ರೋಗಗಳನ್ನು ಉಂಟುಮಾಡಲು ಕಾರಣವಾಗುವ ಅಥವಾ ಪರಿಸರದ ನೈರ್ಮಲ್ಯತೆಗೆ ಪ್ರತಿಕೂಲವಾಗಿ ಪರಿಣಮಿಸುವ ಅಂಥ ಮರಗಳ ಪ್ರಭೇದಗಳನ್ನು ಅಂಥ ಪ್ರದೇಶಗಳಲ್ಲಿ ನೆಡುವುದನ್ನು ಅಥವಾ ಬೆಳೆಸುವುದನ್ನು ನಿಯಂತ್ರಿಸಲು ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976ನ್ನು (1976ರ ಕರ್ನಾಟಕ ಅಧಿನಿಯಮ 76) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಬಿ.ರಮಾನಾಥ ರೈ**
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ.

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ ಘಟಕ, ಬೆಳಗಾವಿ, ಪಿ7, ಕಾಸೂ , 1000–ಪ್ರತಿಗಳು 29ನೇ ನವೆಂಬರ್, 2016

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**TWELFTH SESSION**

# THE KARNATAKA PRESERVATION OF TREES (AMENDMENT) BILL, 2016

**(L.A. Bill No. 40 of 2016)**

A Bill further to amend the Karnataka Preservation of Trees Act, 1976.

Whereas it is expedient further to amend the Karnataka Preservation of Trees Act, 1976 (Karnataka Act 76 of 1976), for the purposes hereinafter appearing;

Be it enacted by the Karnataka State Legislature in the Sixty-seventh year of the Republic of India as follows:-

**1. Short title and commencement.-** (1) This Act may be called the Karnataka Preservation of Trees (Amendment) Act, 2016.

(2) It shall come into force at once.

**2. Insertion of new section 27AA.-** In the Karnataka Preservation of Trees Act, 1976 (Karnataka Act 76 of 1976), after section 27A the following shall be inserted, namely:-

" **27AA. Power of State Government to regulate the choice of species planted.-** The State Government may, if it considers necessary in public interest that planting, propagating or cultivating any tree species is detrimental to the environment or ground water availability, or the species is or liable to cause colonization of alien or invasive species, or is the host or alternate host for pests and vectors that can cause diseases adversely affecting the hygiene of the environment, by notification regulate the planting or cultivation of such species in such areas, and for such time as may be deemed necessary"

## STATEMENT OF OBJECTS AND REASONS

It is considered necessary to amend the Karnataka Preservation of Trees Act, 1976 (Karnataka Act 76 of 1976) to regulate the planting or cultivation of trees in such areas of such species which are detrimental to environment, ground water or liable to cause colonization of alien and invasive species or causes diseases or adversely affect hygiene of the environment.

Hence the Bill,

**FINANCIAL MEMORANDUM**

There is no extra expenditure involved in the proposed Legislative measure.

**B.RAMANATH RAI**
Minister for Forest, Environment
and Ecology

**S.Murthy**
Secretary (I/C)
Karnataka Legislative Assembly.

Government Press, Suvarna Soudha Unit, Belgavi, 29th November 2016 P7, W.D., Copies 1000